ಹಳೆಯ ರೆಕಾರ್ಡ್‌ನಲ್ಲಿರುವಂಥ ಈ ಎಲ್ಲಾ ಅಂಶಗಳ ಮಾಹಿತಿಗಳನ್ನು ನಾವು ಕೊಟ್ಟಿದ್ದೇವೆ. ಇದರ ವಿವರಗಳ ಬಗ್ಗೆ ತಾವು ಇನ್ನೊಮ್ಮೆ ಪ್ರಶ್ನೆ ಕೇಳಬಹುದು. ಒಟ್ಟಿನಲ್ಲಿ ಆ ಕ್ಷೇತ್ರಕ್ಕೆ ಅಲ್ಲಿಂದ ಇಲ್ಲಿಯವರೆಗೂ ಅಂದರೆ ಮೊನ್ನೆ ಇವರು ಕೊಟ್ಟಿರುವಂಥ ದಾನ ಸೇರಿ ಇನ್ನೂ ಕೂಡ continuously attract the devotees and devotees offer their offerings. ಇದು ನಡೆಯುತ್ತಾ ಬರುತ್ತಿದೆ. ಇದರ ಬಗ್ಗೆ ಮಾಹಿತಿ ಸಿಗುತ್ತದೆಯೇ ಎಂದು ಅವರಿಗೆ ಕೇಳುತ್ತೇವೆ.

ಶ್ರೀ ಎನ್. ಸಂಪಂಗಿ : ಛತ್ರದ ಕೊಠಡಿಗಳ ಬಗ್ಗೆ ಹೇಳುವುದಾದರೆ

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ. ಇವೆಲ್ಲವನ್ನು ಕೇಳುವುದಕ್ಕೆ ಆಗುವುದಿಲ್ಲ

ಶ್ರೀ ಎನ್. ಸಂಪಂಗಿ : ಈ ವಿಷಯದ ಬಗ್ಗೆ ಪೂರ್ತಿ ಮಾಡದಿದ್ದರೆ ಹೇಗೆ? ಮಾನ್ಯ ಸಚಿವರ ರಿಪ್ಲೈಗೆ ಸಂಬಂಧಪಟ್ಟಂತೆ ನಾವು ಸಣ್ಣ ಕ್ಲಾರಿಫಿಕೇಷನ್ ಕ್ಲಿಯರ್ ಮಾಡಿಕೊಳ್ಳಬಾರದೆ?

ಶ್ರೀ ಎಸ್. ಸುರೇಶ್ ಕುಮಾರ್ : ಬೇರೆ ಸ್ವರೂಪದಲ್ಲಿ ತೆಗೆದುಕೊಂಡು ಬನ್ನಿ. ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎನ್. ಸಂಪಂಗಿ : ಇನ್ಯಾವ ರೂಪ? ನಾನು ದೇವರ ರೂಪದಲ್ಲಿಯೇ ಈಗ ತಂದಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ದೇವರ ರೂಪದಲ್ಲಿ ಅಂದರೆ ತಿರುಪತಿ ರೂಪದಲ್ಲಿಯೇ ಇರಬಹುದು.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಕೊನೆಯ ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಒಂದು ಅವಕಾಶ ಕೊಡಿ.

ಅಧ್ಯಕ್ಷರು : ಆ ಚರ್ಚೆ ಮುಗಿಯಿತು

ವಿಷಯ : ರಾಮನಗರ ಜಿಲ್ಲೆ ಚನ್ನಪಟ್ಟಣ ಪುರ ಆರಕ್ಷಕ ಠಾಣೆಯ ಆರಕ್ಷಕ ವೃತ್ತ ನಿರೀಕ್ಷಕರು ಸಾರ್ವಜನಿಕರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿರುವ ಬಗ್ಗೆ.

ಶ್ರೀ ಎಂ. ಸಿ. ಅಶ್ವತ್ (ಚನ್ನಪಟ್ಟಣ) : ಮಾನ್ಯ ಅಧ್ಯಕ್ಷರೆ, ರಾಮನಗರ ಜಿಲ್ಲೆ ಚನ್ನಪಟ್ಟಣ ಪುರ ಆರಕ್ಷಕ ಠಾಣೆಯ ಆರಕ್ಷಕ ವೃತ್ತ ನಿರೀಕ್ಷಕರು ಸಾರ್ವಜನಿಕರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿರುವ ಬಗ್ಗೆ ಗೃಹ ಮತ್ತು ಮುಜರಾಯಿ ಸಚಿವರ ಗಮನ ಸೆಳೆಯುತ್ತೇನೆ.

ಡಾ. ವಿ. ಎಸ್. ಆಚಾರ್ಯ (ಗೃಹ ಮತ್ತು ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಮನಗರ ಜಿಲ್ಲೆಯ ಚನ್ನಪಟ್ಟಣ ಪುರ ಪೊಲೀಸ್ ಠಾಣೆ ಆರಕ್ಷಕ ವೃತ್ತ ನಿರೀಕ್ಷಕರು, ಸಾರ್ವಜನಿಕರಿಗೆ ತೊಂದರೆ ಕೊಡುವ ಉದ್ದೇಶದಿಂದ ಯಾವುದೇ ಸುಳ್ಳು ಮೊಕದ್ದಮೆಗಳನ್ನು ಇಲ್ಲಿಯ ವರೆಗೆ ಹೂಡಿರುವುದಿಲ್ಲ. ಈ ಕುರಿತು ಇದುವರೆಗೆ

ಸಾರ್ವಜನಿಕರಿಂದ ಯಾವುದೇ ದೂರುಗಳು ಬಂದಿರುವುದಿಲ್ಲ.

ಮಾನ್ಯ ಸದಸ್ಯರಾದ ಶ್ರೀ ಎಂ. ಸಿ. ಅಶ್ವತ್ಥ್ ರವರ ಹತ್ತಿರ ಏನಾದರೂ ಈ ಬಗ್ಗೆ ಮಾಹಿತಿ ಇದ್ದು, ಅದನ್ನು ನನಗೆ ಕೊಟ್ಟರೆ ಅಧಿಕಾರಿಯ ಮುಖಾಂತರ ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಅಧ್ಯಕ್ಷರು : ನೀವು ದೂರು ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಹೇಳುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎಂ. ಸಿ. ಅಶ್ವತ್ಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಏನೊಂದು ಉತ್ತರ ನೀಡಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ಕಳೆದ ಸುಮಾರು ಎರಡು ತಿಂಗಳಿಂದ ಸುಳ್ಳು ದಾಖಲೆಗಳ ಹಲವಾರು ಪ್ರಕರಣಗಳನ್ನು ಅಲ್ಲಿ ದಾಖಲೆ ಮಾಡಿಕೊಂಡಿದ್ದಾರೆ. ಸಣ್ಣ ಸಣ್ಣ ಒಂದು ದೂರಿಗೆ ಸೆಕ್ಷನ್ 507 ಹಾಕಿರುವಂಥದ್ದು ಮತ್ತು ಇದಕ್ಕೆ simple injury ಎಂದು ಡಾಕ್ಟರ್‌ಗಳು ಸರ್ಟಿಫಿಕೇಟ್ ಕೊಟ್ಟಿರತಕ್ಕಂಥದ್ದರ ಬಗ್ಗೆ ದಾಖಲೆಗಳಿವೆ. ಈ ಮಾಹಿತಿಯನ್ನು ತಮ್ಮ ಗಮನಕ್ಕಾಗಿ ಕೊಡುತ್ತೇನೆ. ಅವರು ಅಲ್ಲಿ ಏನು ಮಾಡುತ್ತಿದ್ದಾರೆಂದರೆ, ಠಾಣೆಗೆ ದೂರು ಕೊಡುವುದಕ್ಕೆ ಹೋಗುವ ಜನರಿಗೆ ಅಲ್ಲಿ ಒಂದು ಭಯದ ವಾತಾವರಣ ಸೃಷ್ಟಿ ಮಾಡಿದ್ದಾರೆ. ಅಲ್ಲಿ ಏನಾಗಿದೆ ಎಂದರೆ, ಅನಾವಶ್ಯಕವಾಗಿ ಕಿರುಕುಳ ಕೊಡತಕ್ಕಂಥದ್ದು ಮತ್ತು ಅಲ್ಪಸಂಖ್ಯಾತರು ಮತ್ತು ಹಿಂದುಳಿದವರಿಗೆ ಬಹುಮುಖ್ಯವಾಗಿ ಸೆಕ್ಷನ್ 507, 307 ಮೇಲೆ ಕೇಸ್ ಬುಕ್ ಮಾಡಿಕೊಳ್ಳುತ್ತಿದ್ದಾರೆ. ಮತ್ತೆ ಸಿಂಪಲ್ ಕೇಸ್‌ಗೆ ನಾಲ್ಕೈದು ಕೇಸ್ ಹಾಕುವಂಥ ಪ್ರಕರಣಗಳೂ ಜಾಸ್ತಿಯಾಗಿವೆ. ಆದ್ದರಿಂದ ದಯಮಾಡಿ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿ ನನ್ನ ತಾಲ್ಲೂಕಿನಲ್ಲಿರುವ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗದ ಜನರಿಗೆ ನ್ಯಾಯ ದೊರಕಿಸಿಕೊಡಿ.

ಅಧ್ಯಕ್ಷರು : ನೀವು ಇದರ ಬಗ್ಗೆ ವಿವರವಾದ ಮಾಹಿತಿ ಕೊಡಿ. ವಿವರವಾದ ಮಾಹಿತಿ ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎಂ. ಸಿ. ಅಶ್ವತ್ಥ್ : ಒಳ್ಳೆಯ ಸಚಿವರು ಇರುವುದರಿಂದ ಅವರಲ್ಲಿ ನಾನು ಕೇಳುವುದೇನೆಂದರೆ ಅವರನ್ನು ದಯಮಾಡಿ ಅಲ್ಲಿಂದ ವರ್ಗಾವಣೆ ಮಾಡಿಕೊಡಬೇಕೆಂದು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಡಾ. ವಿ. ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ಆದರೆ, ನಾನು ಈಗಾಗಲೇ ಹೇಳಿದ ಹಾಗೆ ಅವರು ಸ್ಪೆಸಿಫಿಕ್ ಆಗಿ ಮತ್ತೆ ಏನಾದರೂ ದೂರು ಕೊಟ್ಟರೆ ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.